ಇ) ಈಗಾಗಲೇ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಆಪಸಂ/ಆಶಾ/ ಮವೈಸಂವೈ/2006–07 ದಿನಾಂಕ 02–02–2007 ರಲ್ಲಿ ಆಯುಕ್ತರು ಮೈಸೂರು ಮಹಾನ್ರ ಪಾಲಿಕೆ, ಇವರಿಗೆ ಪಶುಚಿಕಿತ್ಸಾಲಯ ಕಟ್ಟಡಕ್ಕಾಗಿ ನಾಗರೀಕ ಸೌಲಭ್ಯದಡಿ ನಿವೇಶನವನ್ನು ಉಚಿತವಾಗಿ ಇಲಾಖೆಗೆ ನೀಡಲು ಕೋರಲಾಗಿರುತ್ತದೆ ಆದರೆ ಇದುವರೆವಿಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಲೀ ಅಥವಾ ಮೈಸೂರು ಮಹಾನಗರ ಪಾಲಿಕೆಯವರಾಗಲೀ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ/ ಜಾಗ ನೀಡಿದ ಕೂಡಲೇ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು

178(392) ಶ್ರೀ ಶಿವರಾಮು ಬಿ (ಗಂಡಸಿ)

ವಿಷಯ ಪರಿಶಿಷ್ಟ ಜಾತಿ/ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಭರಿಸುವುದು

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರವೇಶ ಪಡೆಯಲು ಪ್ರವೇಶ ಶುಲ್ಕವನ್ನು ಸರ್ಕಾರದ ತೀರ್ಮಾನದಂತೆ ಸಕಾರ ಭರಿಸುತ್ತದೆಯೇ?

ಆ) ಭರಿಸದಿದ್ದಲ್ಲಿ ಕಾರಣವೇನು?

ಇ) ಯಾವಾಗಿನಿಂದ ಭರಿಸಿರುವುದಿಲ್ಲ?

ಈ) ಕೇಂದ್ರ ಸಕಾರದ ಶಿಷ್ಯ ವೇತನ/ಪ್ರವೇಶ ಅನುದಾನ ರಾಜ್ಯ ಸಕಾರಕ್ಕೆ ಬಂದಿರುತ್ತದೆಯೇ ಬಂದಿದ್ದಲ್ಲಿ ಎಷ್ಟು?

ಉ) ಪ್ರವೇಶ ಶುಲ್ಕ ಭರಿಸಲು ಪ್ರತಿ ವರ್ಷ ಸಕಶ್ರಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಬಾಲಚಂದ್ರ ಆರ್ ಜಾರಕಿಹೊಳಿ

ಅ) ಸಮಾಜ ಕಲ್ಯಾಣ ಇಲಾಖೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಪಡೆಯಲು ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುತ್ತದೆ

2 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಕೆಯಿಂದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಪಡೆಯಲು ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುತ್ತದೆ

3 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರವೇಶ ಪಡೆಯಲು ಶುಲ್ಕವನ್ನು ನೀಡುತ್ತಿರುವುದಿಲ್ಲ ಬದಲಾಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಹೊಂದಿದ್ದು ವಾರ್ಷಿಕವಾಗಿ ರೂ 11,000/–ಕ್ಕಿಂತ ಕಡಿಮೆ ಆದಾಯವುಳ್ಳ (ಪ್ರವರ್ಗ–1ಕ್ಕೆ ಆದಾಯ ಮಿತಿ ಇರುವುದಿಲ್ಲ) ಹಿಂದುಳಿದ ವರ್ಗಗಳ ವಿದ್ಯಾರ್ತಿಗಳ ಪರವಾಗಿ ಸರಕಾರದ ಸಮಾನ ಶಿಕ್ಷಣ ಸಂಸ್ಥೆಗಳಲ್ಲಿ ವಿದಿಸಲಾಗಿರುವ ದರಗಳಲ್ಲಿ ಬೋಧನಾ, ಪರೀಕ್ಷಾ ಪ್ರಯೋಗಾಲಯ ಶುಲ್ಕವನ್ನು ಸಂಬಂದಿಸಿದ ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು ಇರ ಜೊತೆಗೆ ಹಿಂದುಳಿದ ವರ್ಗಗಳ ಪ್ರವರ್ಗ 1 ಕ್ಕೆ 1 ರ ವಿದ್ಯಾರ್ಥಿಗಳ ಪ್ರವೇಶ ವಾಚನಾಲಯ ಕ್ರೀಡೆ ಇತ್ಯಾದಿ ಶುಲ್ಕಗಳನ್ನು ಸಹಾ ಸಂಬಂದಿಸಿದ ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) 1 ಸಮಾಜ ಕಲ್ಯಾಣ ಇಲಾಖೆ ಕೇಂದ್ರ ಸರ್ಕಾರದಿಂದ ಶಿಷ್ಯವೇತನ ಪ್ರವೇಶಾನುದಾನ ರಾಜ್ಯ ಸರಕಾರಕ್ಕೆ ಬಂದಿರುತ್ತದೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ 2006–07 ನೇ ಸಾಲಿನಲ್ಲಿ ರೂ 5203 48 ಲಕ್ಷಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಬಿಡುಗಡೆಗೊಳಿಸಿದೆ

2 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕೇಂದ್ರ ಪುರಸ್ಕೃತ ಯೋಜನೆಯೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ 2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 1156 00 ಲಕ್ಷ ಅನುದಾನ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾಗುತ್ತಿದೆ

3 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೇಂದ್ರ ಸಕಾರದಿಮದ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನಕ್ಕಾಗಿ 2006–07 ನೇ ಸಾಲಿನಲ್ಲಿ ರೂ 663 10 ಲಕ್ಷಗಳನ್ನು ಪಡೆಯಲಾಗುತ್ತದೆ

ಉ) 1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ತಿಗಳ ಕುಟುಂಬದ ವಾರ್ಷಿಕ ಆದಾಯ ರೂ 1 00 ಲಕ್ಷದ ಮಿತಿಯೊಳಗೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸರ್ಕಾರವು ಆಯಾ ಸಾಲಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳ ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಶುಲ್ಕ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗನುಗುಣವಾಗಿ ವೆಚ್ಚವನ್ನು ಭರಿಸಲಾಗುತ್ತದೆ

2 ಹಿಂದುಳಿದ ವರ್ಗಗಳ ಪ್ರವರ್ಗ 1ರ ವಿದ್ಯಾರ್ಥಿಗಳಿಗೆ (ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ) ಸರ್ಕಾರದ ಮರು ಪಾವತಿ ದರಗಳಿಗೆ ಪ್ರವೇಶ ಶುಲ್ಕಕ್ಕಾಗಿ ವಾರ್ಷಿಕ ರೂ 1,47,400/– ವರಚ್ಚವನ್ನು ತಗಲುತ್ತದೆ